**ಬಾಲ್ಯದಿಂದ ಬದುಕಿನ ಕೊನೆಯುವರೆಗೂ ಅನಾಥ ಭಾವದ ವಿವಿಧ ಹಂತಗಳನ್ನು ಹಾದು ಬಂದು ಕನ್ನಡ ಸಾಹಿತ್ಯಲೋಕದಲ್ಲಿ ನೆಲೆ ನಿಂತ ಮೊಗಳ್ಳಿಯ ಕಥಾಪಯಣ ಸದಾ ಬರೆಯಲೆಂದೇ ಕಾತರಿಸಿ ಬದುಕಿದ ಲೇಖಕನೊಬ್ಬನ ಕಥಾಪಯಣ. ವಾಸ್ತವತೆ ಮಾಂತ್ರಿಕತೆಗಳ ನಡುವಣ ಈ ಪಯಣ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ವಿಶೇಷ ವಿದ್ಯಮಾನ ಕೂಡ ಆಗಿದೆ.**

ಗೆಳೆಯ ಮೊಗಳ್ಳಿ ಗಣೇಶ್ ತೀರಿಕೊಂಡ ಸುದ್ದಿ ಕೇಳಿದ ಗಳಿಗೆಗಳಲ್ಲಿ 'ಬುಗುರಿ' ಹಾಗೂ 'ತೊಟ್ಟಿಲು' ಎಂಬ ಮೊಗಳ್ಳಿ ಕಥಾಲೋಕದ ಎರಡು ಸಂಕೇತಗಳು ನನ್ನೊಳಗೆ ಸುತ್ತತೊಡಗಿದವು. ಮೊಗಳ್ಳಿಯ ಮೊದಲ ಕಥಾ ಸಂಕಲನ 'ಬುಗುರಿ'ಗೆ ನಾನು ವಿಮರ್ಶೆ ಬರೆದಿದ್ದು, 'ತೊಟ್ಟಿಲು' ಕಾದಂಬರಿ ಕುರಿತು ನನ್ನ ವಿದ್ಯಾರ್ಥಿನಿಯೊಬ್ಬರು ಡಿಸರ್ಟೇಶನ್ ಮಾಡಿದ್ದು ಇವೆಲ್ಲ ನೆನಪಾಗುತ್ತದೆ. ಈ ಕಾರಣದಿಂದ ಕೂಡ ಈ ಸಂಕೇತಗಳು ನನ್ನೊಳಗೆ ಹೆಚ್ಚು ಉಳಿದಂತಿವೆ.

ಬುಗುರಿಯ ತಿರುಗುವ, ಸುತ್ತುವ ಅರ್ಥ; ತೊಟ್ಟಿಲು ಸೂಚಿಸುವ ನೆಮ್ಮದಿ, ಮುಗ್ಧತೆಯ ಅರ್ಥ... ಇವೆರಡನ್ನೂ ಮತ್ತೆ ನೆನೆಯುತ್ತಿದ್ದಾಗ ಚಾಟಿಯಿಲ್ಲದ ಬುಗುರಿ ಥರ ತಿರುಗಿದ ಮೊಗಳ್ಳಿ ಸದಾ ಕಥೆಯ ತೊಟ್ಟಿಲಲ್ಲಿ ನೆಮ್ಮದಿ ಅರಸುತ್ತಿದ್ದ ಕಥೆಗಾರ ಅನ್ನಿಸತೊಡಗಿತು! ಹಾಗೇ ಸುಮ್ಮನೆ ಹಿಂತಿರುಗಿ ನೋಡಿದರೆ, ಮೊಗಳ್ಳಿ ತನ್ನ ಕೃತಿಗಳಿಗೆ ಕೊಟ್ಟ ಹೆಸರುಗಳ ರೂಪಕಾರ್ಥಗಳು ಆಕರ್ಷಕವಾಗಿ ಕಾಣತೊಡಗಿದವು: 'ದೇವರ ದಾರಿ', 'ದೇವ ಸ್ಮಶಾನ', 'ಅಲ್ಲಿ ಆ ಅಲು ಈಗಲೂ', 'ಸೂರ್ಯನ ಬಚ್ಚಿಡಬಹುದೆ', 'ಕನ್ನೆಮಳೆ', 'ತಕರಾರು', 'ನಮ್ಮೂರ ತೊರೆ ಮರೆ', 'ಹೊಕ್ಕುಳು', 'ಕತ್ತಲಿಗೆ ಕಿಚ್ಚು ಹಚ್ಚಿ'... ಹೀಗೆ ಹಲವು ಪ್ರಕಾರಗಳ ಮೊಗಳ್ಳಿ ಕೃತಿಗಳ ಹೆಸರುಗಳು ಮಿಂಚುತ್ತಾ ಹೋದವು. ಈ ರೂಪಕ, ಸಂಕೇತಗಳು ಮೊಗಳ್ಳಿಯಲ್ಲಿ ಸದಾ ಜೀವಂತವಾಗಿದ್ದ ಕವಿಯನ್ನು ನೆನಪಿಸತೊಡಗಿದವು.

1989ರಲ್ಲಿ ಮೊಗಳ್ಳಿ ಗಣೇಶ್ 'ಒಂದು ಹಳೇ ಚಡ್ಡಿ' ಎಂಬ ಕಥೆ ಬರೆದ ರೀತಿಯೇ ಒಂದು ಪರಸಂಗವಾಗಿ ಮೊಗಳ್ಳಿಯ ಬಾಯಲ್ಲಿ, ಸಂದರ್ಶನಗಳಲ್ಲಿ ಮತ್ತೆಮತ್ತೆ ಕಾಣಿಸಿಕೊಂಡು ಕನ್ನಡ ಕಥಾಬರವಣಿಗೆಯ ಜಾನಪದವಾಗಿಬಿಟ್ಟದೆ: ಮೊಗಳ್ಳಿಯ ಹಾಸ್ಟೆಲ್‌ಮೇಟ್ ರಾಜಪ್ಪ ದಳವಾಯಿ ಒಂದು ದಿನ ಕಾಗುಣಿತ, ವಾಕ್ಯರಚನೆಗಳಿಗೆ ಕೇರ್ ಮಾಡದೆ ಬರೆದು ಮಡಗಿದ್ದ ಗೆಳೆಯನ 'ಒಂದು ಹಳೇ ಚಡ್ಡಿ'ಯನ್ನು ನೀಟ್ ಕಾಪಿ ಮಾಡಿ 'ಪ್ರಜಾವಾಣಿ' ಕಥಾಸ್ಪರ್ಧೆಗೆ ಕಳಿಸಿಬಿಟ್ಟಿದ್ದ! ಆ ವರ್ಷ ಯಾವ ಕಥೆಗೂ ಪ್ರಥಮ ಬಹುಮಾನ ಸಿಕ್ಕದೆ 'ಒಂದು ಹಳೇ ಚಡ್ಡಿ'ಗೆ ಎರಡನೆಯ ಅತ್ಯುತ್ತಮ ಕಥೆಯೆಂಬ ಬಹುಮಾನ ಸಿಕ್ಕಾಗ, ಈ ಕಥೆಗೆ ಸಿಕ್ಕ ಖ್ಯಾತಿ, ಅದಕ್ಕೆ ಕನ್ನಡ ಕಥಾಲೋಕ ಕೊಟ್ಟ ವಿಶೇಷ ಸ್ವೀಕಾರ ಇನ್ನಷ್ಟು ಬಹುಮಾನಿತ ಕಥೆಗಳನ್ನು ಬರೆಯಲು ಮೊಗಳ್ಳಿಯನ್ನು ಪ್ರೇರೇಪಿಸಿದವು. ಮುಂದೆ ಮೂರು ಸಲ 'ಪ್ರಜಾವಾಣಿ' ಪ್ರಥಮ ಬಹುಮಾನ ಪಡೆದ ಮೊಗಳ್ಳಿಗೆ ಈ ಥರದ ಕಥೆಗಳ ಕೆಲ ಟ್ರಿಕ್ಕುಗಳು ಕೂಡ ಕರಗತವಾಗತೊಡಗಿದವು; ಅದು ಬೇರೆ ಕಥೆ!

ಕಥೆಗಾರ ಮತ್ತೆಂದೂ ಹಿಂತಿರುಗಿ ಹೋಗುವ ಗ್ಯಾರಂಟಿಯೇ ಇಲ್ಲದಂತೆ ಹದಿಹರೆಯದಲ್ಲಿ ಏಕಾಏಕಿ ಬಿಟ್ಟು ಬಂದಿದ್ದ ಊರು, ಪರಿಸರ, ಘಟನೆಗಳು, ಬಾಲ್ಯದ ಅವಮಾನ, ಊರಿನ ಪಾತ್ರಗಳು; ಆ ಪಾತ್ರಗಳ ಮೇಲಿನ ಸಿಟ್ಟು, ಸೇಡು, ಕರುಣೆ, ಮಮತೆ... ಎಲ್ಲವೂ ಮೊಗಳ್ಳಿಯ ಕಥಾಲೋಕಕ್ಕೆ ನುಗ್ಗಿ ಬರತೊಡಗಿದವು. ಅವರೆಗೆ ಇವೆಲ್ಲವನ್ನೂ ತಮಾಷೆಯಾಗಿ ಗೆಳೆಯರೊಡನೆ ಹೇಳಿಕೊಂಡು ಆನಂದಿಸುತ್ತಿದ್ದ ಕಥೆಗಾರ ಈಗ ಕೂತು ಬರೆಯತೊಡಗಿದ. ಬರೆದು ನಕ್ಕ. ಅತ್ತು ಕಣ್ಣೀರೊರೆಸಿಕೊಂಡ. ಆ ಕಥೆಗಳು ಹಿರಿಯ ಓದುಗರಿಗೂ, ಹೊಸ ಕಾಲದ ಓದುಗ, ಓದುಗಿಯರಿಗೂ ಮೆಚ್ಚುಗೆಯಾಗತೊಡಗಿದವು.